| | | | |
|---|---|---|---|
| 4. | Jewargi | Chikkamudhabal-Chamnal road | 43.10 |
| 5. | Kamalapur | Kamalapur-Kalmod-Chengata road | 40.71 |
| 6. | Sedam | Betagera-Siddapur road | 257.11 |
| 7. | Sedam | Betagera Siddapura road (bridge Constn.) | 77.00 |
| 8. | Shahpur | Hallisagar Tokapur road | 78.24 |
| 9. | Shahpur | Diggi dariyapur Yellamma Temple road | 68.94 |

ಭೂಸನೂರು ಸಕ್ಕರೆ ಕಾರ್ಖಾನೆಯ ಕಬ್ಬು ಅರೆಯುವ ಸಾಮರ್ಥ್ಯ

82(316)

ಶ್ರೀ ರೇವುನಾಯಕ್(ಕಮಲಪೂರ್) ಮಾನ್ಯ ಪಶು ಸಂಗೋಪನಾ ಹಾಗೂ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ತಿಳಿಸುವರೆ?

ಅ) ಅಳಂದ ತಾಲ್ಲೂಕಿನಲ್ಲಿರುವ ಭೂಸನೂರು ಸಕ್ಕರೆ ಕಾರ್ಖಾನೆಯು ಎಷ್ಟು ಪ್ರಮಾಣದ ಕಬ್ಬು ಅರೆಯುವ ಸಾಮರ್ಥ್ಯ ಹೊಂದಿದೆ; ಮತ್ತು ಸದರಿ ಕಾರ್ಖಾನೆಯಿಂದ ಉತ್ಪಾದನೆಯಾಗುತ್ತಿರುವ ಸಕ್ಕರೆ ಪ್ರಮಾಣ ಎಷ್ಟು?

ಆ) ಸದರಿ ಕಾರ್ಖಾನೆಯ ಸುತ್ತಮುತ್ತಲ ಪ್ರದೇಶಗಳಲ್ಲಿ ಈ ಕಾರ್ಖಾನೆಯ ಕಬ್ಬು ಅರೆಯುವ ಸಾಮರ್ಥ್ಯ ಹೊಂದಿರುವುದಕ್ಕಿಂತ ಹೆಚ್ಚಿಗೆ ಉತ್ಪಾದನೆಯಾಗುತ್ತಿದ್ದು, ಹೆಚ್ಚುವರಿ ಕಬ್ಬನ್ನು ಬೇರೆ ಜಿಲ್ಲೆಯಲ್ಲಿರುವ ಕಾರ್ಖಾನೆಗಳಿಗೆ ಕಳುಹಿಸಿಕೊಡಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಎ.ಕೃಷ್ಣಪ್ಪ (ಪಶು ಸಂಗೋಪನಾ ಹಾಗೂ ಸಕ್ಕರೆ ಸಚಿವರು):

ಅ) ಅಳಂದ ತಾಲ್ಲೂಕಿನಲ್ಲಿರುವ ಭೂಸನೂರು ಸಕ್ಕರೆ ಕಾರ್ಖಾನೆಯು

ದಿನವೊಂದಕ್ಕೆ 1250 ಟನ್ ಕಬ್ಬು ಅರೆಯುವ ಸಾಮರ್ಥ್ಯ ಹೊಂದಿದ್ದು ಒಂದು ಹಂಗಾಮಿನಲ್ಲಿ ಸುಮಾರು 1.85 ಲಕ್ಷ ಟನ್ ಕಬ್ಬು ಅರೆಯುವ ಸಾಮರ್ಥ್ಯ ಹೊಂದಿದೆ. ಸಕ್ಕರೆ ಉತ್ಪಾದನೆ ಸುಮಾರು 1,66,000 ಕ್ವಿಂಟಾಲ್

ಆ) ಈ ಕಾರ್ಖಾನೆಯ ಕಾರ್ಯಕ್ಷೇತ್ರದಲ್ಲಿ ಸುಮಾರು 2.65 ಲಕ್ಷ ಟನ್ ಕಬ್ಬಿನ ಉತ್ಪಾದನೆಯ ಅಂದಾಜಿದ್ದು ಈ ಕಾರ್ಖಾನೆಯ 2.25 ಲಕ್ಷ ಟನ್ ನುರಿಸುವ ಅಂದಾಜಿದ್ದು ಉಳಿಯಬಹುದಾದ ಕಬ್ಬು ಬೆಲ್ಲ ತಯಾರಿಕೆ, ಬೀಜ ಇತ್ಯಾದಿಗಳಿಗೆ ಉಪಯೋಗವಾಗಿ ಹೆಚ್ಚುವರಿಯಾಗಿ ಉಳಿಯುವ ಸಂಭವವಿಲ್ಲ. ಒಂದು ವೇಳೆ ಉಳಿದರೆ ಕಬ್ಬನ್ನು ನೆರೆ ರಾಜ್ಯಗಳಿಗೆ ಸಾಗಿಸಲು ಅನುವಾಗುವಂತೆ ಕ್ರಮ ಕೈಗೊಳ್ಳಲು ಈಗಾಗಲೇ ಸರ್ಕಾರ ಆದೇಶಿಸಿದೆ. ಆದೇಶ ಸಂ.ಸಿಐ 180 ಎಸ್‌ಜಿಎಫ್ 99 ದಿ: 3. 1. 2000.

ಲೋಕೋಪಯೋಗಿ ಇಲಾಖೆ ರಸ್ತೆಗಳ ಡಾಂಬರೀಕರಣದ ಬಗ್ಗೆ.

84(285)

ಶ್ರೀ ಶಂಕರಲಿಂಗೇಗೌಡ ಹೆಚ್.ಎಸ್. (ಚಾಮರಾಜ) ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ತಿಳಿಸುವರೆ?

ಅ) ಕಳೆದ 3 ವರ್ಷಗಳಿಂದ ಇಲ್ಲಿಯವರೆಗೆ ಲೋಕೋಪಯೋಗಿ ಇಲಾಖೆಯು ರಸ್ತೆಗಳ ಕಾಮಗಾರಿ ಕೆಲಸಕ್ಕೆ ಶಾಸಕರ ಖೋಟಾದಡಿ ಯಾವ ಯಾವ ವರ್ಷದಲ್ಲಿ ಎಷ್ಟೆಷ್ಟು ಹಣ ಬಿಡುಗಡೆ ಮಾಡಿದೆ?

ಆ) ಇದರಲ್ಲಿ ಯಾವ ಯಾವ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ? ಅವು ಯಾವ ಯಾವ ಹಂತದಲ್ಲಿದೆ?

ಇ) ಈ ಹಣವನ್ನು ಹೆಚ್ಚಿಸುವ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು):

ಅ) ಕಳೆದ 3 ವರ್ಷಗಳಿಂದ ಇಲ್ಲಿಯವರೆಗೆ ಶಾಸಕರ ಖೋಟಾದಡಿ ಬಿಡುಗಡೆಯಾಗಿರುವ ವಿವರಗಳು ಕೆಳಕಂಡಂತಿದೆ:

| | |
|---|---|
| 1997-98 | 1605.00 ಲಕ್ಷ ರೂ. |
| 1998-99 | 222.00 ಲಕ್ಷ ರೂ. |